ಮುಂದೆ ಸಂವಿಧಾನಾತ್ಮಕವಾಗಿ ನಿಗಧಿ ಪಡಿಸಿದ ವಿಧಾನದ ಅನುಸಾರ ನೇಮಕಗೊಳ್ಳದ ವ್ಯಕ್ತಿಗಳ ಸೇವೆಯನ್ನು ಸಕ್ರಮಗೊಳಿಸಲು ಅಥವಾ ಅವರ ಸೇವೆಯನ್ನು ಖಾಯಂಗೊಳಿಸಲು ಕ್ರಮ ಕೈಗೊಳ್ಳಬಾರದೆಂದು ಆದೇಶಿಸಿದೆ. ಆದರೆ ನಿಗದಿತ ನೇಮಕಾತಿ ವಿಧಾನವನ್ನು ಬಹು ಪಾಲು ಪಾಲಿಸಿ ಮಾಡಿದ ನೇಮಕಾತಿಗಳನ್ನು ಒಂದು ಬಾರಿಯ ಕ್ರಮವಾಗಿ ಕೆಲವು ಷರತ್ತುಗಳನ್ನು ಪೂರೈಸಿದಲ್ಲಿ ಸಕ್ರಮಗೊಳಿಸಬಹುದೆಂದು ಈ ತೀರ್ಪಿನಲ್ಲಿ ಹೇಳಲಾಗಿದೆ. ಅವುಗಳೆಂದರೆ ಮಂಜೂರಾದ ಹುದ್ದೆಯಲ್ಲಿ ನೇಮಕಾತಿ ಮಾಡಿರಬೇಕು: ನೇಮಕಾತಿ ಮಾಡುವಾಗ ನೇಮಕಾತಿಗೆ ನಿಗದಿಪಡಿಸಿದ ಅರ್ಹತೆಯನ್ನು ಹೊಂದಿರಬೇಕು: ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಸತತವಾಗಿ ಕಾರ್ಯ ನಿರ್ವಹಿಸಿರಬೇಕು ಮತ್ತು ನ್ಯಾಯಾಲಯಗಳ ಅಥವಾ ನ್ಯಾಯ ಮಂಡಳಿಗಳ ಆದೇಶಗಳಿಂದಾಗಿಯೇ ಹತ್ತು ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ಮುಂದುವರಿದಿರಬಾರದು. ನ್ಯಾಯಾಲಯದ ಈ ತೀರ್ಪಿನ ಹಿನ್ನೆಲೆಯಲ್ಲಿ ದಿನಾಂಕ 1.7.1984ರ ನಂತರ ಸೇವೆಯಲ್ಲಿ ತೊಡಗಿಸಲಾದ ದಿನಗೂಲಿ ನೌಕರರ ಪ್ರಕರಣಗಳ ಕುರಿತು ಎಲ್ಲಾ ಇಲಾಖೆಗಳ ಸಕ್ಷಮ ನೇಮಕಾತಿ ಪ್ರಾಧಿಕಾರಗಳು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ದಿನಾಂಕ 25.5.2006 ರಂದು ಸುತ್ತೋಲೆಯ ಮುಖೇನ ತಿಳಿಸಲಾಗಿದೆ.

727(976) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟಾ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಮಟಾ ತಾಲ್ಲೂಕಿನ ತದಡಿಯಲ್ಲಿ ಉಷ್ಣ ವಿದ್ಯುತ್ ಸ್ಥಾವರ ನಿರ್ಮಾಣದಿಂದ ಪರಿಸರದ ಮೇಲೆ ತೀವ್ರ ದುಷ್ಪರಿಣಾಮ ವುಂಟಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನಾಗರೀಕರೆ ತೀವ್ರ ಪ್ರತಿರೋಧ ಮನಗಂಡು ಸದರಿ ಯೋಜನೆ ಕೈಬಿಡಲಾಗುವುದೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಇತ್ತೀಚಿನ ಮಾಲಿನ್ಯ ನಿಯಂತ್ರಣ ಮಾರ್ಗೋಪಾಯಗಳನ್ನು ಹೊಂದಿರುವ ಆಧುನಿಕ ಉಷ್ಣ ವಿದ್ಯುತ್ ಸ್ಥಾವರವು ಪರಿಸರವನ್ನು ಹಾನಿಗೊಳಿಸುವುದಿಲ್ಲ. ಉದ್ದೇಶಿತ ತದ್ರಿ (ತದಡಿ) ಯೋಜನೆಯು ಪ್ರಾರಂಭಿಕ ಹಂತದಲ್ಲಿದೆ ಮತ್ತು ಪರಿಸರದ ಮೇಲಿನ ಪರಿಣಾಮ ಕುರಿತ ನಿರ್ಧಾರಣೆಯನ್ನು (ಅಸೆಸ್‌ಮೆಂಟ್) ನಡೆಸಬೇಕಾಗಿದೆ.

ಆ) ಉದ್ದೇಶಿತ ವಿದ್ಯುತ್ ಸ್ಥಾವರವನ್ನು ಸ್ಥಾಪಿಸುವುದರಿಂದ ಪರಿಸರದ ಮೇಲೆ ಆಗಬಹುದಾದ ಪರಿಣಾಮದ ಕುರಿತು ತಾಂತ್ರಿಕ ಪರಿಣತರು ಅಧ್ಯಯನವನ್ನು ಮಾಡಬೇಕಿದೆ. ತಾಂತ್ರಿಕ ಅಧ್ಯಯನವಿಲ್ಲದೆ ಪ್ರಸ್ತಾವನೆಯನ್ನು ಕೈಬಿಡಲು ಸಾಧ್ಯವಾಗುವುದಿಲ್ಲ.